# ಬರಿಬಡಿವಾರ

ಸರಿದಾರಿ ಸರದಾರ
ಹರಿಗೋಲು ಹತ್ತಿ
ಬಡಿವಾರ

ಸುಳಿಸುಳಿದು ಸುಳಿಯಲ್ಲಿ
ಬಡಬಾಗ್ನಿ ಒಡಲಲ್ಲಿ
ಕಡುನೀಲ ಕಡಲಲ್ಲಿ
ನಡುನೀರ ಮಡುವಲ್ಲಿ
ಸುಡುಮರಳ ರಣದಲ್ಲಿ
ಮರಮರಳಿ ಋಣದಲ್ಲಿ

ದಿಕ್ಕಿಲ್ಲ ದೆಸೆಯಿಲ್ಲ
ಕಣೆಮಿಣೆ ಕಾಂಚಣ
ಕಣಕಣ ಕೊಂಕಣ
ಹರದಾರಿ ಸುತ್ತಿ

ಕೂಡಿ ಕಂಕಣ
ಕಡೆ ಹಾಯ್ದು ತೆಂಕಣ
ಉಳಿದದ್ದು ಉತ್ತರ
ದಕ್ಷಿಣ ಪ್ರದಕ್ಷಿಣ

ಈಸಬೇಕು ಇದ್ದು
ಜೈಸಬೇಕು ಎಂದದ್ದು
ಬರಿ ಸೌಂಡ್ ಎಂಡ್
ಫ್ಯೂರಿ ಸದ್ದು

ಕೆಲವೊಂದು ಪದ್ಯ
ಹಳೆ ಹುಳಿ ಮದ್ಯ
ಬದುಕಿದ್ದೀಯ ಸತ್ತಿದ್ದೀಯ
ಅಂತ ಮಧ್ಯಮಧ್ಯ
ಎದ್ದು ಬಂದು ಮಾತಾಡ್ತವೆ ಸದ್ಯ
ಅದಕ್ಕೇ ಅದು ಚೋ ಚೋದ್ಯ

